# ಪೀಠಿಕೆ

ಕೆಲಸ ಕಳೆದುಕೊಂಡವವರಿಗೆ ಡ್ಯುಯೆಟ್‌ಅನ್ನು ತಾತ್ಕಾಲಿಕ ಪರಿಹಾರವನ್ನು ಒದಗಿಸುವ ಒಂದು ಮಾರ್ಗವಾಗಿಯಷ್ಟೇ ಜಾನ್ ಸೂಚಿಸಿಲ್ಲ, ಅದನ್ನು ನಗರ ಪ್ರದೇಶದಲ್ಲಿನ ನಿರುದ್ಯೋಗ ಹಾಗೂ ನಗರದಲ್ಲಿ ಇಂದು ಕಾಣುತ್ತಿರುವ ಅವನತಿಗೆ ಒಂದು ಪರಿಹಾರವಾಗಿ ಅವರು ಸೂಚಿಸಿದ್ದಾರೆ. ಡ್ಯುಯೆಟ್‌ನ ಹಿಂದಿನ ಪ್ರೇರಣೆಯೇ ಮನರೇಗಾಗಿಂತ ಬೇರೆ. ಸಾಮಾನ್ಯವಾಗಿ ಉದ್ಯೋಗಾವಕಾಶ ಕಡಿಮೆ ಇದ್ದ ಕಾಲದಲ್ಲಿ, ಕ್ಷಾಮದ ಸಮಯದಲ್ಲಿ, ಕೃಷಿ ಕ್ಷೇತ್ರದಲ್ಲಿ ಉದ್ಯೋಗಗಳು ಇಲ್ಲದೇ ಇದ್ದ ಸಂದರ್ಭದಲ್ಲಿ ಮನರೇಗಾವನ್ನು ಬಳಸಲಾಗುತ್ತಿದೆ. ಅದನ್ನು ಗ್ರಾಮೀಣ ಕಾರ್ಮಿಕರಿಗೆ ವಿಮೆಯಾಗಿ ಯೋಜಿಸಲಾಗಿದೆ. ಆದರೆ ನಗರ ಪ್ರದೇಶಗಳ ಪರಿಸ್ಥಿತಿ ಭಿನ್ನವಾಗಿದೆ. ಅಲ್ಲಿಯೂ ದೊಡ್ಡ ಪ್ರಮಾಣದ ನಿರುದ್ಯೋಗ ಇದೆ ಅನ್ನುವುದು ನಿಜ. ನಗರಗಳಲ್ಲಿ ಸ್ವಲ್ಪಮಟ್ಟಿನ ಮೂಲಭೂತ ಸೌಕರ್ಯಗಳು ಲಭ್ಯವಿದೆ. ಅದನ್ನು ಬಳಸಿಕೊಳ್ಳಬಹುದು. ಅಲ್ಲಿ ಬಳಕೆಯಾಗದ ಕಾರ್ಮಿಕ ಶಕ್ತಿ ಸಾಕಷ್ಟಿದೆ. ಆದರೆ ಆ ಕಾರ್ಮಿಕರನ್ನು ಬಳಸಿಕೊಂಡು ಮೂಲಭೂತ ಸೌಕರ್ಯವನ್ನು ನಿರ್ಮಿಸುವುದಕ್ಕೆ ಬೇಕಾದ ಸಂಪನ್ಮೂಲದ ಕೊರತೆಯಿದೆ. ಈ ಸಮಸ್ಯೆಯನ್ನು ಪರಿಹರಿಸುವುದಕ್ಕೆ ಡ್ಯುಯೆಟ್ ಒಂದು ಮಾರ್ಗವಾಗಬಹುದೇ?

ನಗರಗಳಲ್ಲಿ ನಿರುದ್ಯೋಗದ ಜೊತೆಗೆ ಪರಿಸರದ ಸಮಸ್ಯೆಯನ್ನೂ ಚರ್ಚಿಸಬೇಕಾಗುತ್ತವೆ. ಇವೆರಡೂ ತೆಕ್ಕೆ ಹಾಕಿಕೊಂಡೇ ಇರುತ್ತವೆ. ಹಾಗಾಗಿ ನಗರಗಳಲ್ಲಿ ನಿರುದ್ಯೋಗ ಹಾಗೂ ಪರಿಸರ ಎರಡೂ ವಿಷಯಗಳನ್ನು ಒಟ್ಟೊಟ್ಟಿಗೆ ಯೋಚಿಸಬೇಕಾಗುತ್ತದೆ. ಈ ಸಮಸ್ಯೆಗಳ ಬಗ್ಗೆ ಯೋಚಿಸುವಾಗ ಕೆಲವು ಮೂಲಭೂತ ಪ್ರಶ್ನೆಗಳು ಹುಟ್ಟಿಕೊಳ್ಳುತ್ತವೆ. ಚರ್ಚೆಯಲ್ಲಿ ಭಾಗವಹಿಸಿರುವ ತಜ್ಞರು ಅವುಗಳನ್ನು ಕುರಿತು ಚರ್ಚಿಸಿದ್ದಾರೆ. ಉದಾಹರಣೆಗೆ ಈ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದಕ್ಕೆ ಡ್ಯುಯೆಟ್

ಮಾದರಿಯ ಪ್ರತ್ಯೇಕ ಯೋಜನೆಗಳ ಅವಶ್ಯಕತೆಯಿದೆಯೇ? ಕೇಂದ್ರ ಸರ್ಕಾರ ಇದಕ್ಕಾಗಿ ನೇರವಾಗಿ ನಗರಪಾಲಿಕೆಗಳಿಗೆ ಹೆಚ್ಚಿನ ಹಣವನ್ನು ನೇರವಾಗಿ ವರ್ಗಾಯಿಸಿದರೆ ಸಾಕಾಗುವುದಿಲ್ಲವೇ? ಈ ಯೋಜನೆಯನ್ನು ಜಾರಿಗೆ ತರುವಾಗ ಆಕ್ರಮಗಳು ನಡೆಯಬಹುದು, ಹಣದ ಸೋರಿಕೆಯೂ ಆಗಬಹುದು. ಆ ಬಗ್ಗೆಯೂ ಹಲವು ತಜ್ಞರು ಚರ್ಚಿಸಿದ್ದಾರೆ. ಅದನ್ನು ತಪ್ಪಿಸಲು ಯೋಜನೆಯ ವಿನ್ಯಾಸದಲ್ಲಿ ಮಾಡಬಹುದಾದ ಬದಲಾವಣೆಯ ಬಗ್ಗೆಯೂ ಚರ್ಚಿಸಿದ್ದಾರೆ.

ಇಷ್ಟು ಪೀಠಿಕೆಯೊಂದಿಗೆ ಮುಖ್ಯ ಚರ್ಚೆಗೆ ಬರೋಣ.

**ಸಂದರ್ಭ**

- ನಗರದ ಅನೌಪಚಾರಿಕ ಕ್ಷೇತ್ರದಲ್ಲಿ ಉದ್ಯೋಗದ ಬಿಕ್ಕಟ್ಟು ಇದೆ. ಇತ್ತೀಚಿನ ದಿನಗಳಲ್ಲಿ ಆಗಿಂದಾಗ್ಗೆ ಜಾರಿಯಾಗುತ್ತಿರುವ ಲಾಕ್‌ಡೌನಿನಿಂದ ಲಕ್ಷಾಂತರ ಜನ ಕೆಲಸ ಕಳೆದುಕೊಂಡಿದ್ದಾರೆ. ಅವರಿಗೆ ತಕ್ಷಣದಲ್ಲಿ ಕೆಲಸ ಸಿಗಬಹುದು, ಸಿಗದೆಯೂ ಇರಬಹುದು.
- ನಮ್ಮ ಸರ್ಕಾರಿ ಸಂಸ್ಥೆಗಳಲ್ಲಿ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ (ಶಾಲೆಗಳು, ಕಾಲೇಜುಗಳು, ಆರೋಗ್ಯ ಕೇಂದ್ರಗಳು, ಬಸ್ ನಿಲ್ದಾಣಗಳು, ಜೈಲುಗಳು, ಹಾಸ್ಟೆಲ್ಲುಗಳು, ಪಾರ್ಕುಗಳು, ಮ್ಯೂಸಿಯಂಗಳು, ಕಛೇರಿಗಳು ಇತ್ಯಾದಿಗಳಲ್ಲಿ) ಸೂಕ್ತ ಮೇಲ್ವಿಚಾರಣೆಯ ಕೊರತೆಯಿದೆ. ಉಸ್ತುವಾರಿಯ ಕೊರತೆಯಿಂದ ಅವು ತುಂಬಾ ಹಾಳಾಗಿವೆ.
- ಲಾಕ್‌ಡೌನ್ ತೆಗೆದ ನಂತರ, ಅವು ಮತ್ತೆ ಪ್ರಾರಂಭವಾದಾಗ ಅವುಗಳನ್ನು ದುರಸ್ತಿಗೊಳಿಸುವುದಕ್ಕೆ ತುಂಬಾ ಕೆಲಸ ಹಿಡಿಯುತ್ತದೆ. ಶುಚಿಮಾಡುವುದು, ಬಣ್ಣ ಹೊಡೆಯುವುದು, ಕಳೆ ಕೀಳುವುದು, ರಿಪೇರಿಮಾಡುವುದು, ಪೈಪುಗಳನ್ನು ಸರಿಪಡಿಸುವುದು ಹೀಗೆ ಹಲವು ಕೆಲಸಗಳು ಇರುತ್ತವೆ.
- ಉದ್ಯೋಗ ಖಾತ್ರಿ ಕಾಯ್ದೆಯನ್ನು ಕುರಿತಂತೆ ಇತ್ತೀಚಿನ ದಿನಗಳಲ್ಲಿ ಹೆಚ್ಚಿನ ಆಸಕ್ತಿ ಕಂಡುಬರುತ್ತಿದೆ. ಆದರೆ ನಗರ ಪ್ರದೇಶಗಳಲ್ಲಿ ಪರಿಹಾರ ನೀಡುವುದಕ್ಕೆ ಸಂಬಂಧಿಸಿದಂತಹ ಕೆಲಸಗಳ ಬಗ್ಗೆ ನಮಗೆ ಹೆಚ್ಚಿನ ಅನುಭವವಿಲ್ಲ. ವಿಕೇಂದ್ರೀಕೃತ ನಗರ ಉದ್ಯೋಗ ಹಾಗೂ ತರಬೇತಿ ಅಥವಾ ಡ್ಯುಯೆಟ್ (ಡಿಸೆಂಟ್ರಲೈಸ್ಡ್ ಅರ್ಬನ್ ಎಂಪ್ಲಾಯ್‌ಮೆಂಟ್ ಅಂಡ್ ಟ್ರೈನಿಂಗ್)

ಯೋಜನೆ ನಗರ ಉದ್ಯೋಗ ಖಾತ್ರಿಯ ದಿಕ್ಕಿನಲ್ಲಿ ಒಂದು ಹೆಜ್ಜೆಯಾಗಬಹುದು.

**ಡ್ಯುಯೆಟ್ ಹೇಗೆ ಕೆಲಸ ಮಾಡುತ್ತದೆ?**

- ಸರ್ಕಾರ ಉದ್ಯೋಗದ ಸ್ಟಾಂಪುಗಳನ್ನು ಬಿಡುಗಡೆ ಮಾಡುತ್ತದೆ. ಅವುಗಳನ್ನು ಅನುಮೋದಿತ ಸಾರ್ವಜನಿಕ ಸಂಸ್ಥೆಗಳಿಗೆ ವಿತರಿಸಲಾಗುತ್ತದೆ. ಉದಾಹರಣೆಗೆ ಶಾಲೆಗಳು, ಕಾಲೇಜುಗಳು, ಹಾಸ್ಪೆಲ್ಲುಗಳು, ವಸತಿಗೃಹಗಳು, ಬಂದೀಖಾನೆಗಳು, ಮ್ಯೂಸಿಯಂಗಳು, ನಗರಪಾಲಿಕೆಗಳು, ಸರ್ಕಾರಿ ಇಲಾಖೆಗಳು, ಆರೋಗ್ಯ ಕೇಂದ್ರಗಳು, ಸಾರಿಗೆ ಕಾರ್ಪೋರೇಷನ್ನುಗಳು, ನೆರೆಹೊರೆಯ ಸಂಘಟನೆಗಳು, ನಗರದ ಸ್ಥಳೀಯ ಸಂಸ್ಥೆಗಳು ಮುಂತಾದವು. ಹೀಗೆ ಹಂಚುವಾಗ ಮೊದಲಿಗೆ ಸರ್ಕಾರಿ ಸಂಸ್ಥೆಗಳಿಗೆ ಆದ್ಯತೆ ನೀಡಲಾಗುತ್ತದೆ. ನಂತರದಲ್ಲಿ ಖಾಸಗಿ ಲಾಭರಹಿತ ಸಂಸ್ಥೆಗಳನ್ನು ಪರಿಗಣಿಸಬಹುದು. ಈ ಅನುಮೋದಿತ ಸಂಸ್ಥೆಗಳು ಒಂದು ಉದ್ಯೋಗ ಸ್ಟಾಂಪನ್ನು ಬಳಸಿಕೊಂಡು ಒಬ್ಬ ಕೆಲಸಗಾರನಿಂದ ಒಂದು ದಿನದ ಕೆಲಸ ಮಾಡಿಸಿಕೊಳ್ಳಬಹುದು. ಆದರೆ ಸ್ಟಾಂಪುಗಳನ್ನು ಒಂದು ನಿಗದಿತ ಅವಧಿಯೊಳಗೆ ಬಳಸಿಕೊಳ್ಳಬೇಕು. ಕೆಲಸ ಆದೊಡನೆ ಆ ಸಂಸ್ಥೆಗಳು ಉದ್ಯೋಗದ ಸ್ಟಾಂಪುಗಳನ್ನು ದೃಢೀಕರಿಸಿ ಕಾರ್ಮಿಕರಿಗೆ ನೀಡಬೇಕು. ಕಾರ್ಮಿಕರು ದೃಢೀಕೃತ ಸ್ಟಾಂಪುಗಳನ್ನು ಸಲ್ಲಿಸಿದ ಕೂಡಲೇ ಸರ್ಕಾರ ಅವರ ನಿಗದಿತ ಕೂಲಿಯನ್ನು ನೇರವಾಗಿ ಅವರ ಬ್ಯಾಂಕ್ ಖಾತೆಗೆ ಜಮಾ ಮಾಡುತ್ತದೆ.
- ಸಂಸ್ಥೆಗಳು ನೋಂದಾಯಿತ ಕೆಲಸಗಾರರ ಪಟ್ಟಿಯಿಂದ ಕಾರ್ಮಿಕರನ್ನು ಆಯ್ಕೆ ಮಾಡಿಕೊಳ್ಳಬೇಕು. ಅಥವಾ ಅದಕ್ಕಿಂತ ಉತ್ತಮ ಕ್ರಮ ಎಂದರೆ ಒಂದು ಸ್ವತಂತ್ರ ನೇಮಕಾತಿ ಏಜೆನ್ಸಿಯ ಮೂಲಕ ನೇಮಿಸಿಕೊಳ್ಳಬೇಕು (ಇದರಿಂದ ಸಂಸ್ಥೆಗಳು ಹಾಗೂ ಕಾರ್ಮಿಕರು ಶಾಮೀಲಾಗುವುದನ್ನು ತಪ್ಪಿಸಬಹುದು).

**ಈ ಕ್ರಮದಿಂದ ಹಲವು ಅನುಕೂಲಗಳಿವೆ:**

1. ಮೊದಲನೆಯದಾಗಿ ಹಲವು ಅನುಮೋದಿತ ಸಂಸ್ಥೆಗಳು ಸಕ್ರಿಯಗೊಳ್ಳುತ್ತವೆ. ಈ ಪ್ರಕ್ರಿಯೆಯಲ್ಲಿ ಹೆಚ್ಚೆಚ್ಚು ಉದ್ಯೋಗ ಸೃಷ್ಟಿ-

ಯಾಗಬಹುದು.

2. ಎರಡನೆಯದಾಗಿ, ಕೆಲಸ ಹೆಚ್ಚು ಉತ್ಪಾದಕವಾಗಿರುವಂತೆ ನೋಡಿಕೊಳ್ಳುವುದು ಅನುಮೋದಿತ ಸಂಸ್ಥೆಗಳ ಜವಾಬ್ದಾರಿಯಾಗುತ್ತದೆ.
3. ಮೂರನೆಯದಾಗಿ, ಈ ಯೋಜನೆಯಲ್ಲಿ ಕೆಲಸವನ್ನು ನೀಡುತ್ತಿರುವ ಸಂಸ್ಥೆಗಳು ಈಗಾಗಲೇ ಅಸ್ತಿತ್ವದಲ್ಲಿರುವುದರಿಂದ ಅದಕ್ಕಾಗಿಯೇ ವಿಶೇಷವಾಗಿ ಸಿಬ್ಬಂದಿಗಳನ್ನು ನೇಮಿಸಿಕೊಳ್ಳಬೇಕಾಗಿಲ್ಲ.
4. ನಾಲ್ಕನೆಯದಾಗಿ, ಕೆಲಸಗಾರರಿಗೆ ಕನಿಷ್ಠ ಕೂಲಿ ಖಾತ್ರಿಯಾಗಿ ಸಿಗುತ್ತದೆ. ಹಾಗೂ ಜೊತೆಗೆ ಇತರ ಸೌಲಭ್ಯಗಳೂ ಸಿಗಬಹುದು.

**ಹೆಚ್ಚಿನ ಸಾಧ್ಯತೆಗಳು**

- ಸ್ಟಾಂಪುಗಳ ಅಪಬಳಕೆ ತಪ್ಪಿಸುವ ಉದ್ದೇಶದಿಂದ, ಯೋಜನೆಯಲ್ಲಿ ಅವಕಾಶವಿರುವ ಕೆಲಸಗಳ ಒಂದು ಪಟ್ಟಿಯನ್ನು ತಯಾರಿಸಬೇಕು. ಆ ಪಟ್ಟಿಯಲ್ಲಿ ನಮೂದಾಗಿರುವ ಕೆಲಸಗಳನ್ನಷ್ಟೇ ಸ್ಟಾಂಪುಗಳನ್ನು ಬಳಸಿ ಮಾಡಿಸಬಹುದು. ಆ ಪಟ್ಟಿ ಸಾಕಷ್ಟು ಸಮಗ್ರವಾಗಿರುವಂತೆ ನೋಡಿಕೊಳ್ಳಬೇಕು. ಕೆಲಸಗಳು ಕೇವಲ ಸಾರ್ವಜನಿಕ ಸ್ಥಳಗಳ ನಿರ್ವಹಣೆಗೆ ಸೀಮಿತವಾಗಿರಬಾರದು.
- ಆದರೆ ಕೆಲಸಗಳ ಪಟ್ಟಿ ವಿಪರೀತ ಬೆಳೆದು, ಸಾರ್ವಜನಿಕ ಸಂಸ್ಥೆಗಳು ಈಗಾಗಲೇ ಮಾಡುತ್ತಿರುವ ಕೆಲಸಗಳು ಅದರಲ್ಲಿ ಸೇರಿ ಹೋಗಬಾರದು. ಆ ಬಗ್ಗೆ ಎಚ್ಚರ ವಹಿಸಬೇಕು.
- ಡ್ಯುಯೆಟ್‌ನ ಎಲ್ಲಾ ಉದ್ಯೋಗಗಳು ಯೋಜನೆಯಲ್ಲಿ ಸೂಚಿಸಿರುವ ಹಾಗೂ ಪ್ರಸ್ತುತ ಕಾರ್ಮಿಕ ನಿಯಮಗಳು ಸೂಚಿಸುವ ಕೆಲಸಗಾರರ ಸುರಕ್ಷತೆ ಹಾಗೂ ಕಲ್ಯಾಣ ನಿಯಮಗಳಿಗೆ ಒಳಪಡಬೇಕು.
- ಹದಿನೆಂಟು ವರ್ಷಕ್ಕೆ ಮೇಲ್ಪಟ್ಟ ನಗರದ ಎಲ್ಲಾ ನಿವಾಸಿಗಳಿಗೂ ಡ್ಯುಯೆಟ್ ಯೋಜನೆಗೆ ನೋಂದಾಯಿಸಿಕೊಳ್ಳುವುದಕ್ಕೆ ಅವಕಾಶವಿರಬೇಕು. ಆದರೆ ವಿಶೇಷ ನೋಂದಣಿ ಪ್ರಕ್ರಿಯೆಯಲ್ಲಿ ನೆರೆಹೊರೆಯ ಪ್ರದೇಶದ ಬಡವರಿಗೂ ಅವಕಾಶಕೊಡಬಹುದು. ಹಾಗೆಯೇ ನೇಮಕಾತಿ ಏಜೆನ್ಸಿಗಳು ಕೂಡ ಪಕ್ಕದ ಪ್ರದೇಶದವು ಆಗಿರಬಹುದು.

- ಯೋಜನೆಯಲ್ಲಿ ಕೌಶಲವಿರುವ ಹಾಗೂ ಕೌಶಲವಿಲ್ಲದ ಕಾರ್ಮಿಕರಿಬ್ಬರೂ ಸೇರುತ್ತಾರೆ. ನುರಿತ ಕೆಲಸಗಾರನನ್ನು ಕೆಲಸಕ್ಕೆ ತೆಗೆದುಕೊಂಡಾಗ ಅವನ ಜೊತೆ ಕೌಶಲವಿಲ್ಲದ ಕೆಲಸಗಾರನನ್ನು ನೆರವಿಗೆಂದು ಕಡ್ಡಾಯವಾಗಿ ತೆಗೆದುಕೊಳ್ಳಬೇಕು. ಅದರಿಂದ ತರಬೇತಿ ಹಾಗೂ ಕೌಶಲಾಭಿವೃದ್ಧಿಯ ಅಯಾಮವೂ ಯೋಜನೆಗೆ ಸೇರ್ಪಡೆಯಾದಂತಾಗುತ್ತದೆ. ಕಾಲಕ್ರಮೇಣ ತರಬೇತಿ ನೀಡುವ ಸೌಲಭ್ಯವನ್ನೂ ಯೋಜನೆಗೆ ಸೇರಿಸಿಕೊಳ್ಳುವ ನಿಟ್ಟಿನಲ್ಲಿ ಯೋಚಿಸಬಹುದು. ಉದಾಹರಣೆಗೆ ಲಾಭರಹಿತ ನೇಮಕಾತಿ ಏಜೆನ್ಸಿಗಳು ಲಭ್ಯವಿದ್ದಲ್ಲಿ ಅವುಗಳ ನೆರವನ್ನು ಪಡೆಯಬಹುದು.
- ಸರ್ಕಾರವೇ ಸಂಪೂರ್ಣ ಖರ್ಚನ್ನು ಭರಿಸದೆ, ಸಂಸ್ಥೆಗಳೂ ಅದನ್ನು ಹಂಚಿಕೊಳ್ಳುವ ಬಗ್ಗೆಯೂ ಯೋಚಿಸಬಹುದು. ಕೆಲಸಗಾರರನ್ನು ನೇಮಿಸಿಕೊಳ್ಳುವ ಸಂಸ್ಥೆಗಳು ಸರ್ಕಾರವನ್ನು ಪೂರ್ಣ ಅವಲಂಬಿಸದೆ, ಕೂಲಿಯ ಒಂದು ಭಾಗವನ್ನು ಭರಿಸಬಹುದು ಅಥವಾ ಉದ್ಯೋಗದ ಸ್ಟಾಂಪುಗಳನ್ನು ಪುಕ್ಕಟೆಯಾಗಿ ಪಡೆಯದೆ ಅದನ್ನು ಹಣಕೊಟ್ಟು ಪಡೆಯುವ ಸಾಧ್ಯತೆಯನ್ನೂ ಪರಿಶೀಲಿಸಬಹುದು. ಅದರಿಂದ ಕೆಲಸ ಉತ್ಪಾದಕವಾಗಿರುವುದು ಖಾತ್ರಿಯಾಗಿರುತ್ತದೆ. ಆದರೆ ಆಗ ಉದ್ಯೋಗದ ಸೃಷ್ಟಿ ಕಡಿಮೆಯಾಗುತ್ತದೆ. ಜೊತೆಗೆ ಖರ್ಚನ್ನು ಹಂಚಿಕೊಳ್ಳುವುದು ಹೆಚ್ಚು ಸಂಕೀರ್ಣವಾದ ಪ್ರಕ್ರಿಯೆ. ಹಾಗಾಗಿ ಪ್ರಾರಂಭದಲ್ಲಿ ಆ ಬಗ್ಗೆ ಯೋಜಿಸದಿರುವುದೇ ಒಳ್ಳೆಯದು.
- ಸಾರ್ವಜನಿಕ ಸಂಸ್ಥೆಗಳಿಗೆ ಉದ್ಯೋಗ ಸ್ಟಾಂಪುಗಳನ್ನು ಹಂಚುವುದಕ್ಕೆ ಒಂದು ಸರಳವಾದ ಕ್ರಮ ಬೇಕಾಗುತ್ತದೆ. ಉದ್ಯೋಗ ಸ್ಟಾಂಪುಗಳನ್ನು ವಿಭಿನ್ನ ಸಂಸ್ಥೆಗಳ ನಡುವೆ ಸ್ವಲ್ಪಮಟ್ಟಿಗೆ ವರ್ಗಾವಣೆ ಮಾಡಿಕೊಳ್ಳುವುದಕ್ಕೂ ಅವಕಾಶ ಮಾಡಿಕೊಡಬಹುದು.
- ಕೆಲಸದ ಮೇಲ್ವಚಾರಣೆ ನೋಡಿಕೊಳ್ಳುವುದಕ್ಕೆ ಪರಿಶೀಲಿಸುವುದಕ್ಕೆ ಪರಿಶೋಧನೆ ಮಾಡುವುದಕ್ಕೆ ಹಾಗೂ ಮೌಲ್ಯಮಾಪನ ಮಾಡುವುದಕ್ಕೆ ನಗರಪಾಲಿಕೆಯ ಮಟ್ಟದಲ್ಲಿ ಒಂದು ಸ್ವತಂತ್ರ ಸಮಿತಿಯನ್ನು ನೇಮಿಸಬಹುದು.
- ರಾಷ್ಟ್ರೀಯ ನಗರ ಜೀವನೋಪಾಯ ಯೋಜನೆ

(ಎನ್.ಯು.ಎಲ್.ಎಂ) ಕೂಡ ಡ್ಯುಯಿಟ್‌ನಲ್ಲಿ ನೆರವಾಗಬಹುದು.

- ಡ್ಯುಯಿಟನ್ನು ಮೊದಲಿಗೆ ಒಂದು ನಿರ್ದಿಷ್ಟ ಜಿಲ್ಲೆಯಲ್ಲಿ ಅಥವಾ ನಗರಪಾಲಿಕೆಯಲ್ಲಿ ಪ್ರಾಯೋಗಿಕವಾಗಿ ಜಾರಿಗೊಳಿಸಿ ನೋಡಬಹುದು.

**ನೇಮಕಾತಿ ಏಜೆನ್ಸಿ**

- ನೇಮಕಾತಿ ಏಜೆನ್ಸಿಗಳ ಪ್ರಮುಖ ಕೆಲಸವೆಂದರೆ ನೋಂದಾಯಿತ ಕೆಲಸಗಾರರನ್ನು ಅನುಮೋದಿತ ಸಂಸ್ಥೆಗಳಿಗೆ ಅವುಗಳ ಅವಶ್ಯಕತೆಗೆ ತಕ್ಕಂತೆ ನೇಮಕಮಾಡುವುದು. ಜೊತೆಗೆ ಅವು ಇನ್ನು ಹಲವು ವಿಧಗಳಲ್ಲೂ ನೆರವಾಗಬಹುದು. ಉದಾಹರಣೆಗೆ ಕೆಲಸಗಾರರ ಕೌಶಲವನ್ನು ಅನುಮೋದಿಸುವುದಕ್ಕೆ ಕೆಲಸಗಾರರನ್ನು ಶೋಷಣೆಯಿಂದ ತಪ್ಪಿಸುವುದಕ್ಕೆ ಮತ್ತು ಅವರಿಗೆ ಸಾಮಾಜಿಕ ಸೌಲಭ್ಯಗಳನ್ನು ದೊರಕಿಸಿಕೊಡುವುದಕ್ಕೆ ಸಹ ನೆರವಾಗಬಹುದು.
- ನೇಮಕಾತಿ ಏಜೆನ್ಸಿಗಳನ್ನು ಹಲವು ರೀತಿಯಲ್ಲಿ ನೇಮಿಸಿಕೊಳ್ಳಬಹುದು. ಉದಾಹರಣೆಗೆ 1) ಸ್ಥಳೀಯ ಸರ್ಕಾರ ನಡೆಸುವ ಪ್ರತಿ ನಗರಪಾಲಿಕೆಗೆ ಒಂದು ಏಜೆನ್ಸಿಯನ್ನು ನೇಮಕಮಾಡಬಹುದು ೨2) ಏಜೆನ್ಸಿಯನ್ನು ಕಾರ್ಮಿಕರ ಸಹಕಾರೀ ಸಂಘಟನೆಯಾಗಿ ಯೋಚಿಸಬಹುದು 3) ಲಾಭರಹಿತ ಸಂಘಟನೆಗಳಾಗಿ ಅವುಗಳನ್ನು ಯೋಚಿಸಬಹುದು. ಅಥವಾ ಸಹಕಾರೀ ಸಂಘಟನೆಗಳಾಗಿ ಕೂಡ ನೇಮಕಾತಿ ಏಜೆನ್ಸಿಗಳನ್ನು ಸಂಘಟಿಸಬಹುದು.

**ಪೂರ್ವ ನಿದರ್ಶನಗಳು**

- ಕೆಲವು ದೇಶಗಳು ಇದೇ ಉದ್ದೇಶಗಳನ್ನು ಗಮನದಲ್ಲಿಟ್ಟುಕೊಂಡು ಉದ್ಯೋಗ ಸಬ್ಸಿಡಿ ಯೋಜನೆಗಳನ್ನು ಜಾರಿಗೆ ತಂದಿವೆ. ಉದಾಹರಣೆಗೆ ಹಲವು ಐರೋಪ್ಯ ದೇಶಗಳಲ್ಲಿ "ಸೇವಾ ಓಚರ್ ಯೋಜನೆಗಳು" ಅಂದರೆ ಎಸ್‌ವಿಎಸ್ (ಸರ್ವಿಸ್ ಓಚರ್ ಸ್ಕೀಮ್) ಆಚರಣೆಯಲ್ಲಿದೆ. ಬೆಲ್ಜಿಯಂನಲ್ಲಿ ಮನೆಗಳನ್ನು ಸ್ವಚ್ಛಗೊಳಿಸುವುದು, ಶುಚಿಗೊಳಿಸುವುದು, ಇಸ್ತ್ರಿ ಮಾಡುವುದು ಇತ್ಯಾದಿ ಕೆಲಸಕ್ಕೆ ಜಾರಿಮಾಡಿರುವ ಎಸ್‌ವಿಎಸ್ ಯೋಜನೆ ತುಂಬಾ ಜನಪ್ರಿಯವಾಗಿದೆ. 2016ರಲ್ಲಿ ಪ್ರತಿ

ಐದು ಕುಟುಂಬಗಳಲ್ಲಿ ಒಂದು ಕುಟುಂಬ ಈ ಯೋಜನೆಯನ್ನು ಬಳಸಿಕೊಳ್ಳುತ್ತಿತ್ತು.

**ಉದ್ಯೋಗ ಖಾತ್ರಿ ಯೋಜನೆಯ ಕಡೆಗೆ**

ಡ್ಯುಯೆಟ್‌ಅನ್ನು ಬೇಡಿಕೆ ಆಧಾರಿತ "ಉದ್ಯೋಗ ಖಾತ್ರಿ" ಯೋಜನೆಯನ್ನಾಗಿ ಮಾರ್ಪಡಿಸುವುದು ಸಾಪೇಕ್ಷವಾಗಿ ಸುಲಭ. ಅದು ಸಾಧ್ಯವಾಗಬೇಕಾದರೆ ಕೆಲಸ ಬಯಸಿ ಬರುವವರಿಗೆಲ್ಲಾ ಕೆಲಸ ಕೊಡುವುದಕ್ಕೆ ನಗರಪಾಲಿಕೆಗಳಿಗೆ ಸಾಧ್ಯವಾಗಬೇಕು. ಅದಕ್ಕೆ ಅದು ಬದ್ಧವಾಗಿರಬೇಕು. ಬೇರೆ ಎಲ್ಲೂ ಕೆಲಸ ಸಿಗದೇ ಇದ್ದಾಗ ನಗರಪಾಲಿಕೆ ಅಂತಿಮ ಆಶ್ರಯದಾತನಾಗಬೇಕು. ಇನ್ನು ಪರ್ಯಾಯವಾಗಿ ಡ್ಯುಯೆಟ್, ನಗರಗಳಲ್ಲಿ ಹೆಚ್ಚು ವ್ಯಾಪಕವಾದ ಉದ್ಯೋಗ ಖಾತ್ರಿ ಯೋಜನೆಯ ಭಾಗವಾಗಬಹುದು.

# ನಗರಗಳಲ್ಲಿ ಉದ್ಯೋಗಕ್ಕಾಗಿ "ಡ್ಯುಯೆಟ್" ಯೋಜನೆ

ಜಾನ್ ಡ್ರೇಜ್

Courtesy: Bloomberg

ಭಾರತದ ಒಟ್ಟು ದೇಶಿಯ ಉತ್ಪನ್ನದ ೨೦೨೦-೨೧ರ ಮೊದಲ ತ್ರೈಮಾಸಿಕ ಅವಧಿಯ ಅಂದಾಜು ಬಿಡುಗಡೆಯಾಗುತ್ತಿದ್ದಂತೆ ಆತಂಕ ವ್ಯಕ್ತವಾಗಿದೆ. ಈ ಅವಧಿಯಲ್ಲಿ ಆರ್ಥಿಕ ಚಟುವಟಿಕೆಗಳು ತೀವ್ರವಾಗಿ ಕುಸಿದಿದ್ದವು. ಹಲವು ಕೌಟುಂಬಿಕ ಸಮೀಕ್ಷೆಗಳು ಈ ಅಂಶವನ್ನು ಸ್ಪಷ್ಟ ಪಡಿಸಿವೆ. ನಿರುದ್ಯೋಗ, ಬಡತನ, ಮತ್ತು ಹಸಿವು ಇವೆಲ್ಲಾ ವ್ಯಾಪಕವಾಗಿದ್ದಾಗ ದೇಶದ ಆರ್ಥಿಕತೆ ಸುಸ್ಥಿತಿಯಲ್ಲಿರುವ ಸಾಧ್ಯತೆಗಳು ಕಡಿಮೆ.

ಇತ್ತೀಚೆಗೆ ಲಂಡನ್ ಸ್ಕೂಲ್ ಆಫ್ ಇಕಾನಮಿಕ್ಸ್‌ನ ಆರ್ಥಿಕ ಪರಿಸ್ಥಿತಿಯ ಅಧ್ಯಯನ ಕೇಂದ್ರವು ೮೫೦೦ ನಗರ ಕಾರ್ಮಿಕರನ್ನು ವಿಶೇಷವಾಗಿ ಸಂದರ್ಶಿಸಿ ಸಮೀಕ್ಷೆ ನಡೆಸಿದೆ. ಅದು ಒಟ್ಟಾರೆ ಪರಿಸ್ಥಿತಿಯನ್ನು ಕುರಿತಂತೆ ಒಂದು ಸ್ಪಷ್ಟವಾದ ಚಿತ್ರವನ್ನು ಕೊಡುತ್ತದೆ. ಸಮೀಕ್ಷೆಗೆ ಒಳಗಾದವರಲ್ಲಿ ಸುಮಾರು ಅರ್ಧದಷ್ಟು ಜನರ ಸರಾಸರಿ ವರಮಾನ ಕಡಿಮೆಯಾಗಿದೆ. ವಲಸೆ ಕಾರ್ಮಿಕರ ವರಮಾನವಂತೂ ಹೆಚ್ಚು ತೀವ್ರವಾಗಿ ಕುಸಿದಿದೆ. ಅವರ ವರಮಾನ ಶೇಕಡ ೮೫ರಷ್ಟು ಕಡಿಮೆಯಾಗಿದೆ. ಬಡವರಲ್ಲಿ ವರಮಾನದ ಕುಸಿತದ ಪ್ರಮಾಣ ಇನ್ನೂ ಹೆಚ್ಚು ತೀವ್ರವಾಗಿದೆ. ಇದರಿಂದ ಪಟ್ಟಣದ ಕಾರ್ಮಿಕರಲ್ಲಿ ಅಸಮಾನತೆ ಇನ್ನಷ್ಟು ಹೆಚ್ಚಾಗಿದೆ. ಮೇಲ್‌ಸ್ತರದ ಶೇಕಡ ೨೫ರಷ್ಟು ಕಾರ್ಮಿಕರ ವರಮಾನ ಲಾಕ್‌ಡೌನ್ ಮೊದಲು ಶೇಕಡ ೬೪ರಷ್ಟು ಇದ್ದುದು, ಲಾಕ್‌ಡೌನ್ ನಂತರ ಶೇಕಡ ೮೪ರಷ್ಟಾಯಿತು. ಅಂದರೆ ಕೆಳಸ್ತರದಲ್ಲಿದ್ದ ಶೇಕಡ ೭೫ರಷ್ಟು ಜನ ಕೇವಲ ಶೇಕಡ ೧೬ರಷ್ಟು ವರಮಾನವನ್ನು ಹಂಚಿಕೊಂಡು ಜೀವನ ನಡೆಸುತ್ತಿದ್ದಾರೆ.

ಕಳೆದ ಕೆಲವು ವಾರಗಳಲ್ಲಿ ನಗರದ ಕಾರ್ಮಿಕರ ಸ್ಥಿತಿಯಲ್ಲಿ ಸ್ವಲ್ಪಮಟ್ಟಿನ ಸುಧಾರಣೆಯಾಗಿರಬಹುದು. ವಲಸೆ ಕಾರ್ಮಿಕರು ತಮ್ಮ ಊರುಗಳಿಗೆ ಮರಳಿ ಹೋಗಿದ್ದರಿಂದ, ಅವರು ಕೆಲಸ ಮಾಡುತ್ತಿದ್ದ ಪ್ರದೇಶಗಳಲ್ಲಿ ಕೆಲ-

ಸಗಾರರ ಕೊರತೆಯಾಗಿದೆ. ಹಾಗಾಗಿ ಸ್ಥಳೀಯ ಕೆಲಸಗಾರರಿಗೆ ಒಂದಿಷ್ಟು ಅನುಕೂಲವಾಗಿರಬಹುದು. ಆದರೂ ವಿಶೇಷವಾಗಿ ಲಾಕ್‌ಡೌನ್ ಮುಂದುವರಿದಿರುವ ಪ್ರದೇಶಗಳಲ್ಲಿ ಆರ್ಥಿಕ ಚಟುವಟಿಕೆ ಸಾಮಾನ್ಯ ಮಟ್ಟಕ್ಕಿಂತ ತುಂಬಾ ಕಡಿಮೆಯಿದೆ. ಕೆಲವು ವೃತ್ತಿಗಳ ಜನರಿಗಂತೂ ಹಲವು ತಿಂಗಳುಗಳಿಂದ ಕೆಲಸವೇ ಇಲ್ಲ, ಸದ್ಯದಲ್ಲಿ ಕೆಲಸ ಸಿಗುವ ಸಾಧ್ಯತೆಯೂ ಇಲ್ಲ. ತಿಂಡಿ ಮಾರುವವರು, ಬಸ್ ಕಂಡಕ್ಟರುಗಳು, ಸಿನಿಮಾಹಾಲಿನಲ್ಲಿ ಕೆಲಸ ಮಾಡುತ್ತಿರುವವರು, ಲೈಂಗಿಕ ಕಾರ್ಯಕರ್ತೆಯರು, ಬ್ಯಾಂಡ್ ಕಲಾವಿದರು, ವಲಸೆ ಕಾರ್ಮಿಕರು ಇವರ ಬಗ್ಗೆ ಯೋಚಿಸಿ. ಇವರಲ್ಲಿ ಬಹುಪಾಲು ಜನ ಆಸರೆಗಾಗಿ ಹತಾಶೆಯಿಂದ ಪರ್ಯಾಯ ಕೆಲಸಗಳನ್ನು ಹುಡುಕುತ್ತಿದ್ದಾರೆ.

ಈ ಪರಿಸ್ಥಿತಿಯಿಂದಾಗಿ, ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆಯ ಮಾದರಿಯಲ್ಲೇ ನಗರದಲ್ಲೂ ಒಂದು ಉದ್ಯೋಗ ಖಾತ್ರಿ ಕಾಯ್ದೆಯನ್ನು ಕುರಿತು ಚಿಂತಿಸುವ ಸಮಯ ಬಂದಿದೆ. ನಗರಗಳಲ್ಲೂ ನರೇಗಾ ಮಾದರಿಯಲ್ಲಿ ಒಂದು ಉದ್ಯೋಗ ಯೋಜನೆಯನ್ನು ರೂಪಿಸಬೇಕು. ಅಂತಹ ಯೋಜನೆಯಿಂದ ನಗರಗಳಲ್ಲಿ ಕೆಲಸ ಕಳೆದುಕೊಂಡವರಿಗೆ ಪರ್ಯಾಯ ಉದ್ಯೋಗ ದೊರೆಯಬಹುದು. ಕೇವಲ ತಾತ್ಕಾಲಿಕವಾಗಿ ಕೆಲಸ ಕಳೆದುಕೊಂಡವರಿಗೆ ಮಾತ್ರವಲ್ಲ, ಕೆಲಸವೇ ಇಲ್ಲದವರಿಗೂ ಇಂತಹ ಯೋಜನೆಗಳು ಉದ್ಯೋಗ ನೀಡಬಹುದು. ಆದರೆ ನಗರದಲ್ಲಿ ಅಂತಹ ಉದ್ಯೋಗ ಖಾತ್ರಿ ಯೋಜನೆಯನ್ನು ರೂಪಿಸುವುದಕ್ಕೆ ಹೆಚ್ಚಿನ ಅನುಭವಬೇಕು. ನಗರ ಪ್ರದೇಶಗಳಲ್ಲಿ ಸಾರ್ವಜನಿಕ ಕೆಲಸಗಳಿಗೆ ಸಂಬಂಧಿಸಿದಂತೆ ನಮಗಿರುವ ಅನುಭವ ಯೋಜನೆಗಳನ್ನು ರೂಪಿಸುವುದಕ್ಕೆ ಸಾಕಾಗುವುದಿಲ್ಲ. ನರೇಗಾ ಯೋಜನೆಯನ್ನು ರೂಪಿಸುವುದರ ಹಿಂದೆ ಗ್ರಾಮೀಣ ಪ್ರದೇಶದಲ್ಲಿ ಕ್ಷಾಮದ ಪರಿಹಾರಕ್ಕೆ ಸಂಬಂಧಿಸಿದಂತೆ ಹಲವು ದಶಕಗಳ ಅನುಭವ ಇತ್ತು ಅನ್ನುವುದನ್ನು ಮರೆಯಬಾರದು. ಆ ಅನುಭವ ನರೇಗಾ ಯೋಜನೆಯನ್ನು ರೂಪಿಸುವಲ್ಲಿ ನೆರವಾಯಿತು.

### ಸಿದ್ಧ ಚೌಕಟ್ಟನ್ನು ಮೀರಿ ಯೋಚಿಸೋಣ

ಸಿದ್ಧ ಚೌಕಟ್ಟನ್ನು ಮೀರಿ ಯೋಚಿಸಿದರೆ ನಗರ ಕಾರ್ಮಿಕರಿಗೆ ತಕ್ಷಣದ ಪರಿಹಾರ ಕೊಡುವಂತಹ ನಗರ ಉದ್ಯೋಗ ಯೋಜನೆಯನ್ನು ರೂಪಿಸಲು ಸಾಧ್ಯ. ಅಂತಹ ಯೋಜನೆಗಳಿಂದ ನಮಗೆ ಬೇಕಾದ ಅನುಭವ ಸಿಗುತ್ತದೆ. ಕೆಲವು ರಾಜ್ಯಗಳು ಈ ರೀತಿಯ ಯೋಜನೆಗಳನ್ನು ರೂಪಿಸಲು

ಈಗಾಗಲೇ ಪ್ರಯತ್ನಿಸಿವೆ. ಕೇರಳ ೧೦ ವರ್ಷದ ಹಿಂದೆಯೇ ಅಯ್ಯನಕಲಿ ನಗರ ಉದ್ಯೋಗ ಖಾತ್ರಿ ಯೋಜನೆಯನ್ನು ರೂಪಿಸಿತ್ತು. ೨೦೧೯-೨೦ರಲ್ಲಿ ಅದರಿಂದ ೨೭ ಲಕ್ಷ ವ್ಯಕ್ತಿ-ದಿನಗಳ ಉದ್ಯೋಗ ಸೃಷ್ಟಿಯಾಗಿತ್ತು. ಈ ವರ್ಷ ಹಿಮಾಚಲಪ್ರದೇಶ, ಜಾರ್ಖಂಡ್, ಮತ್ತು ಒರಿಸ್ಸಾ ಸೇರಿದಂತೆ ಹಲವು ರಾಜ್ಯಗಳು ಕೂಡ ನಗರ ಉದ್ಯೋಗ ಖಾತ್ರಿ ನೀಡುವ ಯೋಜನೆಗಳನ್ನು ಪ್ರಾರಂಭಿಸಿವೆ. ಆದರೆ ಬಜೆಟ್ ಕೊರತೆಯಿಂದ, ಈ ಯೋಜನೆಗಳು ಬಹುಮಟ್ಟಿಗೆ ಸಾಂಕೇತಿಕ ಯೋಜನೆಗಳಾಗಿಬಿಟ್ಟಿವೆ. ಇದಕ್ಕಾಗಿ ವಿನಿಯೋಗಿಸಿರುವ ಹಣ ಕೂಡ ಅತ್ಯಲ್ಪ.

ಇನ್ನೊಂದು ಪರ್ಯಾಯ ಯೋಜನೆಯನ್ನು ನೋಡೋಣ. ಅದನ್ನು ವಿಕೇಂದ್ರೀಕೃತ ನಗರ ಉದ್ಯೋಗ ಹಾಗೂ ತರಬೇತಿ ಅಥವಾ ಡ್ಯುಯೆಟ್ (ಡಿಸೆಂಟ್ರಲೈಸ್ಡ್ ಅರ್ಬನ್ ಎಂಪ್ಲಾಯ್‌ಮೆಂಟ್ ಅಂಡ್ ಟ್ರೈನಿಂಗ್) ಯೋಜನೆ ಎಂದು ಕರೆಯೋಣ. ಅದರ ಮೂಲಭೂತ ಚಿಂತನೆ ಹೀಗಿದೆ. ಸರ್ಕಾರ ಉದ್ಯೋಗದ ಸ್ಟಾಂಪುಗಳನ್ನು ಬಿಡುಗಡೆ ಮಾಡುತ್ತದೆ. ಅವನ್ನು ಕೆಲವು ಅನುಮೋದಿತ ಸಾರ್ವಜನಿಕ ಸಂಸ್ಥೆಗಳಿಗೆ ಉದಾಹರಣೆಗೆ – ಶಾಲೆಗಳು, ಕಾಲೇಜುಗಳು, ಹಾಸ್ಟೆಲ್ಲುಗಳು, ವಸತಿ ಗೃಹಗಳು, ಬಂದಿಖಾನೆಗಳು, ಮ್ಯೂಸಿಯಂಗಳು, ಮುನಿಸಿಪಾಲಿಟಿಗಳು, ಸರ್ಕಾರಿ ಇಲಾಖೆಗಳು, ಆರೋಗ್ಯ ಕೇಂದ್ರಗಳು, ಸಾರಿಗೆ ಕಾರ್ಪೋರೇಷನ್ನುಗಳು, ನೆರೆಹೊರೆಯ ಅಸೋಸಿಯೇಷನ್ನುಗಳು, ನಗರದ ಸ್ಥಳೀಯ ಸಂಸ್ಥೆಗಳು ಮುಂತಾದವುಗಳಿಗೆ ವಿತರಿಸಲಾಗುತ್ತದೆ. ಒಂದು ಉದ್ಯೋಗ ಸ್ಟಾಂಪು ಅಂದರೆ ಒಬ್ಬ ವ್ಯಕ್ತಿಯ ಒಂದು ದಿನದ ಕೆಲಸ. ಪ್ರತಿಯೊಂದು ಸಂಸ್ಥೆಯೂ ತಮ್ಮಲ್ಲಿ ಇರುವ ಸ್ಟಾಂಪುಗಳನ್ನು ಈ ಕ್ರಮದಲ್ಲಿ ಬಳಸಿಕೊಳ್ಳಬಹುದು. ಆದರೆ ಅದನ್ನು ನಿಗದಿತ ಅವಧಿಯಲ್ಲಿ ಬಳಸಿಕೊಳ್ಳಬೇಕು. ಜೊತೆಗೆ ನೇಮಕಗೊಂಡ ಕೆಲಸಗಾರರಿಗೆ ಕೆಲಸ ಕೊಡುವುದಕ್ಕೆ ಆ ಸಂಸ್ಥೆಗಳಿಗೆ ಸಾಧ್ಯವಾಗಬೇಕು. ಕೆಲಸದ ನಂತರ ಆ ಸಂಸ್ಥೆಗಳು ತಮ್ಮ ದೃಢೀಕರಣದೊಂದಿಗೆ ಸ್ಟಾಂಪುಗಳನ್ನು ಕೆಲಸಗಾರರಿಗೆ ನೀಡಬೇಕು. ಕೆಲಸಗಾರರು ಆ ದೃಢೀಕೃತ ಉದ್ಯೋಗದ ಸ್ಟಾಂಪುಗಳನ್ನು ಸಲ್ಲಿಸಿದ ಕೂಡಲೇ ಅವರ ಕೂಲಿಯನ್ನು ಸರ್ಕಾರ ಅವರ ಬ್ಯಾಂಕ್ ಖಾತೆಗೆ ನೇರವಾಗಿ ವರ್ಗಾಯಿಸಬೇಕು. ಸಂಸ್ಥೆಗಳು ಹಾಗೂ ಕಾರ್ಮಿಕರು ಶಾಮೀಲಾಗುವುದನ್ನು ತಪ್ಪಿಸಲು ಕೆಲಸಗಾರರನ್ನು ನೇಮಿಸುವುದಕ್ಕೆ ಒಂದು ಸ್ವತಂತ್ರ ನೇಮಕಾತಿ ಏಜೆನ್ಸಿ ಇರಬೇಕು. ಕೆಲವು ಉದ್ಯೋಗವನ್ನು ಅರೆಕಾಲಿಕ ಉದ್ಯೋಗವನ್ನಾಗಿಯೂ ಯೋಚಿಸಬಹುದು. ಉದಾಹರಣೆಗೆ ದಿನಕ್ಕೆ ನಾಲ್ಕು ಗಂಟೆ-